"ನೀರನ್ನು ಮಿತವಾಗಿ ಬಳಸಿ"
"ಕನ್ನಡದಲ್ಲೇ ವ್ಯವಹರಿಸಿ"

Phone : 080-22945340
E-mail: cedesign@bwssb.gov.in
Website: www.bwssb.karnataka.gov.in

# ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

# BANGALORE WATER SUPPLY & SEWERAGE BOARD

ಮುಖ್ಯ ಅಭಿಯಂತರರು (ವಿನ್ಯಾಸ & ಗುಣ ಆಶ್ವಾಸನೆ) ರವರ ಕಛೇರಿ,
೯ನೇ ಮಹಡಿ, ಕಾವೇರಿ ಭವನ, ಬೆಂಗಳೂರು-೫೬೦೦೦೯

ಸಂಖ್ಯೆ:ಬೆಂ.ಜ.ಮಂ/ಮುಅ(ವಿನ್ಯಾಸ&ಗು.ಆ)/ಅ.ಮು.ಅ(ವಿನ್ಯಾಸ)/ತಾ.ಸ(ವಿ&ಗುಆ)/ 1464 /2022-23 ದಿನಾಂಕ: 02/01/2023

## ಸೇರ್ಪಡೆ/ತಿದ್ದುಪಡಿ ಜ್ಞಾಪನಾ ಪತ್ರ

**ವಿಷಯ:** 2021-22 ನೇ ಸಾಲಿನ ಸಂಪುಟ-5 ರ ದರಪಟ್ಟಿಯ ಹೆಚ್ಚುವರಿ ಅಂಶಗಳ ಸೇರ್ಪಡೆ ಮತ್ತು ತಿದ್ದುಪಡಿ ಕುರಿತು.

**ಉಲ್ಲೇಖ:**
1. ದಿ:27.12.2022 ರಂದು ನಡೆದ ಖಾಯಂ ನಿರತ ಏಕರೂಪ ದರಪಟ್ಟಿ ತಯಾರಿಕಾ ಸಮಿತಿಯ 2022-23 ನೇ ಸಾಲಿನ 6 ನೇ ಸಭೆಯ ನಡವಳಿಗಳು.
2. ಆ.ಸಂ: ಲೋ.ಇ-51 ಆರ್‌ಡಿಎಫ್ 2019, ಬೆಂಗಳೂರು ದಿ:25.03.2022
3. ಸಂ.ಬೆಂ.ಜ.ಮಂ/ಮು.ಅ(ವಿ)/ಅ.ಮು.ಅ(ವಿ)/ಟಿ.ಎ(ವಿ)/2659/2021-22 ದಿ:25.03.2022
4. ಸ.ಆ.ಸಂ.ನ.ಅ.ಇ08/ಐಎನ್‌ಐ2021 (ಇ-ಕಛೇರಿ), ಬೆಂಗಳೂರು ದಿ:04.12.2021.

*****

**ಪ್ರಸ್ತಾವನೆ:**

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (2) ರ ಸರ್ಕಾರದ ಆದೇಶದನ್ವಯ ನೀರು ಸರಬರಾಜು ಮತ್ತು ಒಳಚರಂಡಿ ಕಾಮಗಾರಿಗಳ ಏಕರೂಪ ಅನುಸೂಚಿ ದರಪಟ್ಟಿ: 2021-22 ನ್ನು ದಿನಾಂಕ: 25.03.2022 ರಿಂದ ಜಾರಿಗೆ ಬರುವಂತೆ ಉಲ್ಲೇಖ (3) ರ ಜ್ಞಾಪನಾ ಪತ್ರದಲ್ಲಿ ಅಳವಡಿಕೆಗೆ ಪ್ರಕಟಿಸಲಾಗಿದೆ.

ಸದರಿ ದರಪಟ್ಟಿಯಲ್ಲಿ ಕೆಲವು ಹೆಚ್ಚುವರಿ ಅಂಶಗಳ ಸೇರ್ಪಡೆ ಮತ್ತು ತಿದ್ದುಪಡಿಯ ಅವಶ್ಯಕತೆ ಕಂಡುಬಂದ ಹಿನ್ನೆಲೆಯಲ್ಲಿ ಉಲ್ಲೇಖ (4) ರ ಆದೇಶದನ್ವಯ ರಚಿತವಾಗಿರುವ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ/ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ/ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಗಳನ್ನೊಳಗೊಂಡ ನೀರು ಸರಬರಾಜು ಮತ್ತು ಒಳಚರಂಡಿ ಕಾಮಗಾರಿಗಳ ಏಕ ರೂಪ ದರಪಟ್ಟಿಯ ತಯಾರಿಕ ಖಾಯಂ ಸಮಿತಿಯು ಸಭೆ ಸೇರಿ ಪ್ರಕಟಿತ ದರಪಟ್ಟಿಯಲ್ಲಿ O-PVC PN-16 & PN-25 ಅಂಶಗಳಿಗೆ ದರಗಳಿದ್ದು O-PVC PN-12.5 ನ ವಿವಿಧ ವ್ಯಾಸಗಳ ಕೊಳವೆಗಳ ಹಾಗೂ O-PVC ಕೊಳವೆಗಳಿಗೆ ಸಂಬಂಧಪಟ್ಟ ಅಳವಡಿಕೆಗಳ (Fittings) ದರಗಳು ಬಿಟ್ಟುಹೋಗಿರುವುದರಿಂದ ಈ ಹೆಚ್ಚುವರಿ ಅಂಶಗಳನ್ನು ಸೇರ್ಪಡೆಗೊಳಿಸುವ ಬಗ್ಗೆ ಹಾಗೂ MAT.Code 5436-Providing Coffer Dams Charges at 10% of Excavation ಅಂಶವು ಏಕರೂಪ ದರಪಟ್ಟಿ 2021-22 ರ ಸಂಪುಟ-4 ರಲ್ಲಿ ಲಭ್ಯವಿದ್ದು ಪುನರಾವರ್ತನೆ ಆಗಿರುವುದರಿಂದ ಸದರಿ ಅಂಶವನ್ನು ಏಕರೂಪ ದರಪಟ್ಟಿ 2021-22 ರ ಸಂಪುಟ-5 ರಿಂದ ತೆಗೆದುಹಾಕುವ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಅಗತ್ಯ ಪ್ರಕಟಣೆ ಹೊರಡಿಸಲು ತೀರ್ಮಾನಿಸಲಾಯಿತು.

**ಆದೇಶ:**

ನೀರು ಸರಬರಾಜು ಮತ್ತು ಒಳಚರಂಡಿ ಕಾಮಗಾರಿಗಳ ಏಕ ರೂಪ ದರಪಟ್ಟಿಯ ತಯಾರಿಕ ಖಾಯಂ ಸಮಿತಿಯ ಉಲ್ಲೇಖ-1 ರಲ್ಲಿನ ಸಭೆಯಲ್ಲಿ ಮೇಲಿನ ಅಂಶಗಳನ್ನು ಪರಿಶೀಲಿಸಿ, ಸಮಿತಿಯ ಅಭಿಪ್ರಾಯದಂತೆ

ಸಂಪುಟ 5 ರ ದರಪಟ್ಟಿಯ ಅವಶ್ಯವಿರುವ ಹೆಚ್ಚುವರಿ ಹೊಸ ಅಂಶಗಳ ಸೇರ್ಪಡೆ ಹಾಗೂ ತಿದ್ದುಪಡಿಗಳನ್ನು ದಿನಾಂಕ: 02.01.2023 ರಿಂದ ಅನ್ವಯಿಸುವಂತೆ ಆದೇಶಿಸಲಾಗಿದೆ ಹಾಗೂ ಮಂಡಳಿಯ ಅಧಿಕೃತ ಜಾಲತಾಣವಾದ www.bwssb.karnataka.gov.in ರಲ್ಲಿ ಪ್ರಕಟಿಸಲಾಗಿದೆ.

ನೀರು ಸರಬರಾಜು ಮತ್ತು ಒಳಚರಂಡಿ ಕಾಮಗಾರಿಗಳ ಏಕರೂಪ ದರಪಟ್ಟಿ 2021–22 ರಲ್ಲಿನ ಹೊಸ ಅಂಶಗಳ ಸೇರ್ಪಡೆಗಳನ್ನು 2nd Addendum ನಲ್ಲಿ ಪ್ರಕಟಿಸಿದ್ದು, ಸದರಿ ಅಂಶಗಳ ದರಗಳು ಹಾಗೂ ತಾಂತ್ರಿಕ ವಿವರಣೆಯನ್ನು ಯಥಾವತ್ತಾಗಿ ಅಳವಡಿಸಿಕೊಳ್ಳಲು ಹಾಗೂ 3rd Corrigendum ನಲ್ಲಿ ತಿಳಿಸಿರುವ MAT.Code 5436-Providing Coffer Dams Charges at 10% of Excavation ಅಂಶವನ್ನು ಏಕರೂಪ ದರಪಟ್ಟಿ 2021–22 ರ ಸಂಪುಟ–5 ರಿಂದ ಕೈಬಿಡಲಾಗಿರುವುದನ್ನು ರಾಜ್ಯ ವ್ಯಾಪ್ತಿ ನೀರು ಸರಬರಾಜು ಮತ್ತು ಒಳಚರಂಡಿ ಕಾಮಗಾರಿಗಳನ್ನು ಕೈಗೊಳ್ಳುವ ಎಲ್ಲಾ ಇಲಾಖೆಗಳಿಗೆ ಅನ್ವಯವಾಗುವಂತೆ ತಕ್ಷಣದಿಂದ ಹಾಗೂ ಮುಂದಿನ ಆದೇಶದವರೆಗೆ ಜಾರಿಗೆ ತರಲಾಗಿದೆ.

**ಅಡಕ:** 1) 2nd Addendum

2) 3rd Corrigendum

**ಮುಖ್ಯ ಅಭಿಯಂತರರು (ವಿನ್ಯಾಸ & ಗುಣ ಆಶ್ವಾಸನೆ)**
**ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ**
**ಹಾಗೂ ಅಧ್ಯಕ್ಷರು, ನೀರು ಸರಬರಾಜು ಮತ್ತು ಒಳಚರಂಡಿ**
**ಕಾಮಗಾರಿಗಳ ಏಕರೂಪ ದರಪಟ್ಟಿ ಸಮಿತಿ**

ಪ್ರತಿಯನ್ನು:

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಧ್ಯಕ್ಷರು, ಅನುಸೂಚಿ ದರಗಳ ಪರಿಶೀಲನಾ ಸಮಿತಿ ರವರ ಘನ ಮಾಹಿತಿಗಾಗಿ.
2. ಸರ್ಕಾರದ ಕಾರ್ಯದರ್ಶಿಗಳು ಹಾಗೂ ಅಧ್ಯಕ್ಷರು, ಅನುಸೂಚಿ ದರಗಳ ರಚನಾ ಸಮಿತಿ ರವರ ಘನ ಮಾಹಿತಿಗಾಗಿ.
3. ಅಧ್ಯಕ್ಷರು, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ/ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಬೆಂಗಳೂರು / ಆಯುಕ್ತರು, ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ, ಬೆಂಗಳೂರು, ರವರ ಘನ ಮಾಹಿತಿಗಾಗಿ.
4. ಸರ್ಕಾರದ ಕಾರ್ಯದರ್ಶಿಗಳು ಆರ್ಥಿಕ ಇಲಾಖೆ (ವೆಚ್ಚ), ಬೆಂಗಳೂರು ರವರ ಘನ ಮಾಹಿತಿಗಾಗಿ.
5. ಅಧ್ಯಕ್ಷರು, ತಾಂತ್ರಿಕ ಕಾರ್ಯಪಡೆ, ಬೆಂಗಳೂರು, ಏಕರೂಪ ಅನುಸೂಚಿ ದರಪಟ್ಟಿ ರವರ ಘನ ಮಾಹಿತಿಗಾಗಿ.
6. ಪ್ರಧಾನ ಅಭಿಯಂತರರು/ಮುಖ್ಯ ಅಭಿಯಂತರರು BWSSB, KUWS&DB and RDW&SD ಹಾಗೂ ಸರ್ಕಾರದ ಇತರ ಇಲಾಖೆ / ನಿಗಮ /ಮಂಡಳಿ ರವರ ಮಾಹಿತಿಗಾಗಿ.
7. ಅಧೀಕ್ಷಕ ಅಭಿಯಂತರರು / ಅಪರ ಮುಖ್ಯ ಅಭಿಯಂತರರು BWSSB, KUWS&DB and RDW&SD ಹಾಗೂ ಸಮಿತಿಯ ಸದಸ್ಯರು ಹಾಗೂ ಸರ್ಕಾರದ ಇತರೆ ಇಲಾಖೆ/ನಿಗಮ ಮಂಡಳಿ ರವರ ಮಾಹಿತಿಗಾಗಿ.
8. ಕಾರ್ಯ ಪಾಲಕ ಅಭಿಯಂತರರು ಸರ್ಕಾರದ ಎಲ್ಲಾ ಇಲಾಖೆ/ನಿಗಮ/ಮಂಡಳಿ ರವರ ಮಾಹಿತಿಗಾಗಿ.
9. ಕಛೇರಿ ಕಡತಕ್ಕಾಗಿ.